**ಇ–ಗೋಲ್ಡ್ ಭಾರತದ ನಿಯಮಗಳನ್ನು ಉಲ್ಲಂಘಿಸುತ್ತದೆ: ಭಾರತೀಯ ರಿಸರ್ವ್ ಬ್ಯಾಂಕ್**

**ಅಕ್ಟೋಬರ್ 21, 2002**

ಕೆಲವು ಏಜೆನ್ಸಿಗಳು/ವ್ಯಕ್ತಿಗಳು, ವಿದ್ಯುನ್ಮಾನ ಕರೆನ್ಸಿಯಾದ 'ಇ–ಗೋಲ್ಡ್' ಅನ್ನು ಒಳಗೊಳ್ಳುವ ವ್ಯವಹಾರಗಳನ್ನು ಭಾರತದಲ್ಲಿ ಮುಕ್ತವಾಗಿ ಅನುಮತಿಸಲಾಗುತ್ತಿದೆ ಮತ್ತು ಇ–ಗೋಲ್ಡ್ ಎಂಬುದು ಕರೆನ್ಸಿಯ ಸ್ಥಾನಮಾನ ಹೊಂದಿದೆ ಎಂದು ಸಾರ್ವಜನಿಕರಲ್ಲಿ ಅಭಿಪ್ರಾಯ ಮೂಡುವಂತೆ ಮಾಡುತ್ತಿವೆ/ಮಾಡುತ್ತಿದ್ದಾರೆ ಎಂಬುದನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಗಮನಕ್ಕೆ ತರಲಾಗಿದೆ ಮತ್ತು ಅನಿವಾಸೀ ಭಾರತೀಯರು ಭಾರತಕ್ಕೆ ತಮ್ಮ ಹಣ ವರ್ಗಾವಣೆ ಮಾಡಲು 'ಇ–ಗೋಲ್ಡ್' ಅನ್ನು ಬಳಸಬಹುದು ಎಂದು ತಿಳಿಸುವ ಕರಪತ್ರಗಳನ್ನು ವೃತ್ತಪತ್ರಿಕೆಗಳ ಜೊತೆಯಲ್ಲಿ ಹಂಚುತ್ತಿರುವುದು ಸಹ ರಿಸರ್ವ್ ಬ್ಯಾಂಕ್ ಗಮನಕ್ಕೆ ಬಂದಿದೆ.

ಸಾರ್ವಜನಿಕರ ಮಾಹಿತಿಗಾಗಿ 'ಇ–ಗೋಲ್ಡ್' ಎಂಬುದು ಯಾವುದೇ ಪ್ರಭುತ್ವ ದೇಶದ ಕರೆನ್ಸಿ ಅಲ್ಲ ಎಂಬುದನ್ನು ರಿಸರ್ವ್ ಬ್ಯಾಂಕು ಸ್ಪಷ್ಟಪಡಿಸುತ್ತದೆ. ಯಾವುದೇ ವ್ಯವಹಾರದಲ್ಲಿ 'ಇ–ಗೋಲ್ಡ್' ಅನ್ನು ಬಳಸುವುದು ಭಾರತದಲ್ಲಿ ಜಾರಿಯಲ್ಲಿರುವ ನಿಯಮಗಳ ಉಲ್ಲಂಘನೆಯಾಗುತ್ತದೆ. ಆದ್ದರಿಂದ, ಸಾರ್ವಜನಿಕರಿಗೆ, ಬ್ಯಾಂಕುಗಳಿಗೆ, ಹಣ ವಿನಿಮಯಗಾರರಿಗೆ ಮತ್ತು ಇತರ ಹಣಕಾಸು ಸಂಸ್ಥೆಗಳಿಗೆ ಅವರ ವ್ಯವಹಾರಗಳಲ್ಲಿ 'ಇ–ಗೋಲ್ಡ್' ಅನ್ನು ಕರೆನ್ಸಿಯಾಗಿ ಬಳಸಬಾರದೆಂದು ಎಚ್ಚರಿಕೆ ನೀಡಿದೆ.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–03/409